ಲಕ್ಷ ರೂಪಾಯಿ ಈಗ ಪೇಮೆಂಟ್ ಮಾಡಬೇಕಾದ ಬಿಲ್ಲನ್ನು ಪ್ರೋಸೆಸ್‌ಗೆ ಕೊಟ್ಟಿದ್ದೇವೆ. 90 ಲಕ್ಷ ರೂಪಾಯಿಗಳನ್ನು ಇನ್ನು ಹತ್ತು ದಿವಸದೊಳಗೆ ಸರ್ಕಾರದಿಂದ ಸಂಬಂಧಪಟ್ಟ ರೈತರಿಗೆ ಪೇಮೆಂಟ್ ಮಾಡುವುದಕ್ಕೆ ಆದೇಶವನ್ನು ಕಳಿಸಿಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಆತ್ಮಾನಂದ:– ಫಲಾನುಭವಿಗಳು ಎಷ್ಟು ಜನರನ್ನು ಗುರುತಿಸಲಾಗಿದೆ ಎಂದು ನಾನು ಕೇಳಿದ್ದೇನೆ. ಎಷ್ಟು ಫಲಾನುಭವಿಗಳಿಗೆ ಇಲ್ಲಿಯವರೆಗೆ ಕೊಡಲಾಗಿದೆ ಎಂಬುದು ನನ್ನ ಮೂಲಭೂತವಾದ ಪ್ರಶ್ನೆ. 76.72 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರೋ ಅಥವಾ 1992-93ನೇ ಸಾಲಿನಲ್ಲಿ ಈ ಯೋಜನೆಗೆಂದು ಇಟ್ಟಿದ್ದೀರೋ? ಇದರಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಗುರುತಿಸಿ ಎಷ್ಟು ಜನರಿಗೆ ಸಹಾಯಧನ ಕೊಟ್ಟಿದ್ದೀರಿ ಎಂದು ಕೇಳಬಯಸುತ್ತೇನೆ. ಇನ್ನು 196 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಅದರಲ್ಲಿಯೂ ಕೂಡ ಹೆಚ್ಚಿನ ಫಲಾನುಭವಿಗಳನ್ನು ಗುರುತಿಸಿದ್ದೀರೋ ಅಥವಾ ಇದ್ದಷ್ಟು ಫಲಾನುಭವಿಗಳಿಗೆ ಕೊಡುತ್ತೀರೋ ಎಂದು ಕೇಳಬಯಸುತ್ತೇನೆ.

ಶ್ರೀ ಎ. ಕೃಷ್ಣಪ್ಪ:– ನನ್ನ ಉತ್ತರದಲ್ಲೇ ಅವರ ಪ್ರಶ್ನೆಗೆ ಉತ್ತರ ಇದೆ. ನಾನು ಕತೆಯಲ್ಲಿ ಒಂದು ಮಾತನ್ನು ಹೇಳಿದ್ದೇನೆ. ಇನ್ನು 143 ಲಕ್ಷ ರೂಪಾಯಿಗಳನ್ನು ನಾವು ಪಾವತಿ ಮಾಡಿದರೆ ಕರ್ನಾಟಕ ರಾಜ್ಯದಲ್ಲಿ ಬಂದಂಥ ಅರ್ಜಿಗಳು ಸಂಪೂರ್ಣವಾಗಿ ವಿಲೇವಾರಿಯಾಗುತ್ತವೆ. ಆದರೆ ಈಗ ಗುರುತು ಮಾಡಿ ಹಣ ಕೊಡಬೇಕಾದಂಥಾದ್ದು 90 ಲಕ್ಷ ಎಂದು ಕೂಡ ಹೇಳಿದ್ದೇನೆ. ಇದು 1992-93ಕ್ಕೆ. ಇನ್ನು 15 ದಿವಸಗಳೊಳಗೆ ಈ ಹಣವನ್ನು ಸರ್ಕಾರ ಬಿಡುಗಡೆ ಮಾಡುತ್ತವೆ ಎಂದು ಹೇಳಿದ್ದೇನೆ. ಎಷ್ಟು ಅರ್ಜಿಗಳು ಇವೆಯೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ನಾನು ಅವರಿಗೆ ಹೇಳಿದ್ದೇನೆ, ಇದುವರೆಗೆ ನಮಗೆ ಮಾಹಿತಿ ಸಿಕ್ಕಿರುವಂತಾದ್ದು ಒಂದು ಸಾವಿರ ಅರ್ಜಿಗಳು ನಮ್ಮ ಕಡೆ ಉಳಿದಿವೆ ಎಂದು. ಮೂರನೇ ಹಂತದಲ್ಲಿ ಏನು ಯುಟಿಲೈಸೇಷನ್ ಸರ್ಟಿಫಿಕೇಟನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಡಬೇಕಾಗಿತ್ತು, ಅದನ್ನು ಕಳಿಸಿಕೊಟ್ಟಿದ್ದೇವೆ. ಅದನ್ನು ಕಳಿಸಿಕೊಟ್ಟಕೂಡಲೇ ಅವರು ಇನ್ನೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದ್ದರಿಂದ ನಾವು ಲೆಕ್ಕ ಹಾಕಿ ಇಟ್ಟಿದ್ದೇವೆ. ಇರುವಂಥ ಕಡೇ ಅರ್ಜಿದಾರರಿಗೆ ಕೂಡ ಹಣ ಬಿಡುಗಡೆ ಮಾಡುವುದಕ್ಕೆ ಸರ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ನಾನು ಹೇಳಿದ್ದೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ:– ಬಹುಶಃ ಇದು 20 ಪರ್ಸೆಂಟ್ ಸಬ್ಸಿಡಿ ಸ್ಕೀಮನ್ನು ಸನ್ಯಾಸ್ಯ ದೇವಿಲಾಲ್ ಅವರ ಕಾಲದಲ್ಲಿ 50 ಪರ್ಸೆಂಟ್ ಮಾಡಿದರು. ಒಂದು ಕೋಟಿ ರೂಪಾಯಿಗಳನ್ನು ಟೆಂಟೆಟಿವ್ ಅಲಾಟ್‌ಮೆಂಟ್ ಅಂತ ಕರ್ನಾಟಕ ಸರ್ಕಾರಕ್ಕೆ ಕೊಟ್ಟಿದ್ದರು. ಮಾನ್ಯ ಸಚಿವರು ದಯವಿಟ್ಟು ಕೇಳಬೇಕು. ಸಬ್ಸಿಡಿ ಕೊಡುವುದಕ್ಕೆ ತಯಾರಾಗಿದ್ದೇವೆ ಎಂದು ಕೇಂದ್ರ ಸರ್ಕಾರ ಕಮಿಟ್ ಆಗಿತ್ತು. ಮತ್ತು ಯಾವ್ಯಾವ ತೋಟಗಾರಿಕಾ ಬೆಳೆಗಳಿವೆ, ಅವಕ್ಕೂ ಕೂಡ ಕೊಡಬೇಕು ಎಂದು ಕೂಡ ಹೇಳಿತ್ತು ಎಂಬುದನ್ನು ಸನ್ಯಾಸ್ಯ ಆತ್ಮಾನಂದ ಅವರಿಗೆ ತಾವು ಇದನ್ನು ಹೇಳಿಲ್ಲ. ನನ್ನಲ್ಲಿರುವ ಮಾಹಿತಿ ಪ್ರಕಾರ ನಾನು ಒಂದು ಪ್ರಶ್ನೆ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಒಂದು ವರ್ಷದ ಬೆಳೆಗೂ ಕೂಡ ಈ ಸ್ಕೀಮನ್ನು ಎಕ್ಸ್‌ಟೆಂಡ್ ಮಾಡಿದ್ದೀರಿ. ಮತ್ತೆ ರಾಜ್ಯದ ರೈತರಿಗೆ ನಿಮ್ಮ ಇಲಾಖೆಯವರು ಸೀಲಿಂಗ್ ತೋರಿಸಿಬಿಟ್ಟಿದ್ದಾರೆ; ಮೂರಕ್ಕೆ ಕೊಡುತ್ತೇವೆ, ನಾಲ್ಕಕ್ಕೆ ಕೊಡುತ್ತೇವೆ, ಇದರ ನಂತರ ಅರ್ಜಿನ ಕೊಡಬಾರದು ಎಂದು ಹೇಳಿದ್ದಾರೆ. ಇದು ವ್ಯಾಪಕವಾಗಿ ಎಲ್ಲರಿಗೂ ಕೂಡಬೇಕಾದ ಸ್ಕೀಮನ್ನು ತಾವು ಏಕೆ ಕೊಟ್ಟಿಲ್ಲ? ಇದರಲ್ಲಿ ಕೋಕೋಸಟ್ ಡವಲಪ್‌ಮೆಂಟ್ ಬೋರ್ಡ್‌ನವರು 15 ಸಾವಿರ ಸಬ್ಸಿಡಿ ಕೊಡಬೇಕಾಗಿತ್ತು. ಅದೆಷ್ಟು ಬಳಸಿದ್ದೀರಿ? ಆಮೇಲೆ ಕೇಂದ್ರ ಸರ್ಕಾರದ ಗ್ರಾಂಟ್ ಎಷ್ಟು? ತಾವು ಎಷ್ಟು ಬಳಸಿದ್ದೀರಿ ಎಂಬುದರ ಬಗ್ಗೆ ಮಾಹಿತಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಕೃಷ್ಣಪ್ಪ:– ನಾನು ಈಗಾಗಲೇ ಹೇಳಿದ್ದೇನೆ, ಕೇಂದ್ರ ಸರ್ಕಾದಿಂದ ನಮಗೆ ಮೊದಲನೆಯ ಹಂತದಲ್ಲಿ 50 ಲಕ್ಷ ಬಂದಿದೆ. ಮತ್ತೆ 50 ಲಕ್ಷ ರೂಪಾಯಿ ಬಂದಿದೆ. ಈಗ ಮತ್ತೆ 2 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಡಲ್ಲಿಗೆ ಹೋಗಿ ಸಂಬಂಧಪಟ್ಟ ಸಚಿವರಿಗೆ ಮೆಮೋರ್ಯಾಂಡಮ್ಮನ್ನು ಕೊಟ್ಟಾಗ ಅವರು ಹೇಳಿದರು ಏನೆಂದರೆ ಒಂದು ಕೋಟಿ ರೂಪಾಯಿ ಏನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಅದಕ್ಕೆ ಯುಟಿಲೈಸೇಷನ್ ಸರ್ಟಿಫಿಕೇಟನ್ನು ನೀವು ನಮಗೆ ಕಳುಹಿಸಿ. ಅದು ಮುಟ್ಟಿದ ತಕ್ಷಣ ಮಿಕ್ಕ ಹಣವನ್ನು ಬಿಡುಗಡೆ ಮಾಡುತ್ತೇವೆ ಎಂದು ಅವರು ಮಾತು ಕೊಟ್ಟಿದ್ದಾರೆ. ಆ ಪ್ರಕಾರ ಈಗ ಒಂದು ಕೋಟಿ ರೂಪಾಯಿಗೆ ಯುಟಿಲೈಸೇಷನ್ ಸರ್ಟಿಫಿಕೇಟ್ ಭಾರತ ಸರ್ಕಾರಕ್ಕೆ ಹೋಗಿದೆ. ಈಗ ಅವರು ನಮಗೆ 2 ಕೋಟಿ ಬಿಡುಗಡೆ ಮಾಡಲಿದ್ದಾರೆ. ಅದರ ಪೈಕಿ ನಮ್ಮಲ್ಲಿ ಉಳಿದಿರುವ ಒಂದು ಸಾವಿರ ಚಿಲ್ಲರೆ ಅರ್ಜಿಗಳು ಮಾತ್ರ ಇವೆ. ಹಣ ಬೇಕಾಗಿರುವುದು 143 ಲಕ್ಷ ರೂಪಾಯಿಗಳು.

ಆಮೇಲೆ ಒಂದು ವರ್ಷದ ಬೆಳೆ ಮತ್ತು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನಾನು ವಿಚಾರ ಮಾಡುತ್ತೇನೆ. ಕಾರಣ ಹತ್ತಿಗೆ ಈ ಕಾರ್ಯಕ್ರಮವನ್ನು ಕೊಟ್ಟಿದ್ದೀರಾ ? ಬೇರೆ ಬೇರೆ ಬೆಳೆಗಳು ಇದ್ದವು ಅವುಗಳಿಗೆ ಕೊಡಬಹುದಾಗಿತ್ತು ಎನ್ನುವ ಸಲಹೆ ಮುಖೇನ ಅವರು ಏನು ಮಾತು ಕೇಳಿದ್ದಾರೆ ಯಾವ ಕಾರಣದಿಂದ ಯಾವ ಹಿನ್ನೆಲೆಯಲ್ಲಿ ಹತ್ತಿ ಬೆಳೆಯಲಿಕ್ಕೆ ಈ ಒಂದು ಕಾರ್ಯಕ್ರಮವನ್ನು ಕೊಟ್ಟಿದ್ದಾರೆ ರಾಜ್ಯ ಸರ್ಕಾರ ಅಂತ ಹೇಳಿ ನಾನು ವಿಚಾರ ಮಾಡಿ ಅದು ಏನಾದರೂ ಅಗತ್ಯ ಇದೆಯೋ ಇಲ್ಲವೋ ಎನ್ನುವ ಮಾತನ್ನು ನೋಡಿ ಅಗತ್ಯ ಇದ್ದರೆ ಮುಂದುವರಿಸುತ್ತೇವೆ. ಇಲ್ಲದಿದ್ದರೆ ಬೇರೆ ಬೆಳೆಗಳಿಗೆ ಇದನ್ನು ಈ ಅನುದಾನವನ್ನು ಈ ಸಹಾಯವನ್ನು ಕೊಡಬಹುದು ಅನ್ನುವುದಾದರೆ ತೀರ್ಮಾನವನ್ನು ತೆಗೆದುಕೊಂಡು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಸಿ. ಬೈರೇಗೌಡ:– ಒಂದು ಅರ್ಜಿಗೆ 50 ಸಾವಿರ ರೂಪಾಯಿಗಿಂತ ಹೆಚ್ಚು ಕೊಡುವುದಕ್ಕೆ ಅವಕಾಶ ಇಲ್ಲ. 50 ಸಾವಿರ ಅಂದರೆ ಪ್ರತಿಯೊಂದರ ಬೆಲೆ ಏರುತ್ತಿರುವುದರಿಂದ 2–3 ಏಕರೆಗೆ ಮಾಡಿಕೊಂಡರೆ ಹಣ ಮುಗಿದು ಹೋಗುತ್ತದೆ. ಈ ಮಿತಿ ಏನು ಇದೆ ಈ ಮಿತಿಯನ್ನು ಹೆಚ್ಚು ಮಾಡುತ್ತೀರಾ ?

ಶ್ರೀ ಎ. ಕೃಷ್ಣಪ್ಪ:– ಮಾನ್ಯ ಅಧ್ಯಕ್ಷರೇ, ಈ ಯೋಜನೆ ಬರೀ ರಾಜ್ಯ ಸರ್ಕಾರದ್ದು ಅಲ್ಲ. ರಾಜ್ಯ ಸರ್ಕಾರದ್ದೇ ಆಗಿದ್ದರೆ ನಾವು ನೇರವಾಗಿ ಉತ್ತರ ಕೊಡಬಹುದಾಗಿತ್ತು. ಈ ಮಾತನ್ನು ನಾವು ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗಿದೆ. ಪಸ್ತುಗಳ ಬೆಲೆ ದುಬಾರಿ ಆಗಿದೆ. ಆ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. 50 ಸಾವಿರ ರೂಪಾಯಿ ಏನೇನೂ ಸಾಕಾಗುವುದಿಲ್ಲ ಎಂದು. ಅದು ನಮಗೆ ಅರಿವು ಇದೆ. ಅದನ್ನು ಭಾರತ ಸರ್ಕಾರಕ್ಕೆ ಮುಂದಿನ ದಿನಗಳಲ್ಲಿ ಬರೆಯುತ್ತೇವೆ.

ಶ್ರೀ ಸಿ. ಬೈರೇಗೌಡ:– ರಾಜ್ಯ ಸರ್ಕಾರದವರೇ ಕೊಡಿ.

ಶ್ರೀ ಎ. ಕೃಷ್ಣಪ್ಪ:– ಆ ಸಿದ್ಧಾಂತ ಏನಿದೆ ಅಂದರೆ, ರಾಜ್ಯ ಸರ್ಕಾರದಿಂದ ಜಾಸ್ತಿ ಮಾಡಿ ಎನ್ನುವುದಾದರೆ ಈ ನೀತಿಯನ್ನು ನಾವು ಬದಲಾವಣೆ ಮಾಡಬೇಕಾಗಿದೆ. ಈಗ ಸಲಹೆ ಬಂದಿದೆ. ಸರ್ಕಾರದೊಡನೆ ಮಾತನಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಮಾನ್ಯ ಅಧ್ಯಕ್ಷರೇ, ಪ್ರಶ್ನೆಗಳ ಪಟ್ಟಿಯಲ್ಲಿ ಈ ಸಂಬರಿನ ಪ್ರಶ್ನೆ ಪ್ರಿಂಟ್ ಆಗಿಲ್ಲ. ಇದು ಯಾವ ರೀತಿ ಆಯಿತು ಎನ್ನುವುದು ನನಗೆ ಗೊತ್ತಿಲ್ಲ.

ಅಧ್ಯಕ್ಷರು :– ಇದು ಹೆಲ್ಪ್ ಓವರ್ ಪ್ರಶ್ನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಹೆಲ್ಡ್ ಓವರ್ ಎಂದು ಇದ್ದಿದ್ದರಿಂದ ನಾನು ಅದಕ್ಕೆ ಉತ್ತರವನ್ನು ನೋಡಲಿಕ್ಕೆ ಆಗಲಿಲ್ಲ. ಹೆಲ್ಡ್ ಓವರ್ ಪ್ರಶ್ನೆ ಯಾರಿಂದ ಬಂತು ಏನ್ನುವುದು ನನಗೆ ಗೊತ್ತಿಲ್ಲ. ದಯಮಾಡಿ ಕ್ಷಮಿಸಬೇಕು. ಇನ್ನೊಂದು ದಿವಸ ಆ ಪ್ರಶ್ನೆ ಹಾಕಿದರೆ ನಾನು ಉತ್ತರ ಕೊಡುವುದಕ್ಕೆ ಸಿದ್ಧನಾಗಿದ್ದೇನೆ.

ಅಧ್ಯಕ್ಷರು:– ಅವರು ಅಭ್ಯಾಸ ಮಾಡಿಲ್ಲ, ಇನ್ನೊಂದು ದಿವಸ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, ಅವರಿಗೆ ಪ್ರೈವೇಟ್ ಸೆಕ್ರಟರಿ ಇರುತ್ತಾರೆ. ಆ ಸಂಬಂಧಪಟ್ಟ ಅಧಿಕಾರಿಗಳು ಮಂತ್ರಿಗಳ ಗಮನಕ್ಕೆ ತರಬೇಕಾಗಿತ್ತು. ಅದು ಅವರ ಕರ್ತವ್ಯ. ಇವತ್ತಿನ ದಿವಸ ಪ್ರಶ್ನೆ ಬಂದು ಪುನಃ ಮಂತ್ರಿಗಳು ಇವತ್ತಿನ ದಿವಸ ನನಗೆ ಗೊತ್ತಿಲ್ಲ ಎಂದು ಹೇಳಿ ಅವರನ್ನು ಪೇಚಿಗೆ ಸಿಕ್ಕಿಸುವಂತಹ ಪರಿಸ್ಥಿತಿಗೆ ಇವರ ಅಧಿಕಾರಿಗಳು ತರುವುವಾದರೆ ನಾವು ಅಧಿಕಾರಿಗಳ ಮರ್ಜಿಯಲ್ಲಿ ಇಲ್ಲಿ ಕೆಲಸ ಮಾಡಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ದಯವಿಟ್ಟು ಹೇಳಿ. ಏಕೆ ಆ ರೀತಿ ಆಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಹೇಗೆ ಬೇಕಾದರೂ ಆಕ್ಷೇಪಣೆ ಮಾಡಬಹುದು. ನನಗೆ ಇರತಕ್ಕಂಥ ಪರಿಸ್ಥಿತಿಯನ್ನು ನಾನು ಸಭೆಯ ಮುಂದೆ ಹೇಳಿದ್ದೇನೆ. ಅದರ ಮೇಲೆ ತಾವು ಯಾವ ರೀತಿ ಆಜ್ಞೆ ಮಾಡುತ್ತೀರೋ ಆ ರೀತಿ ನಾನು ಮಾಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಹೊಸದುರ್ಗ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಸಾಲ ಮನ್ನಾ ಯೋಜನೆ ವಿಫಲ.

322 (1958): ಶ್ರೀ ಇಲ್ಕಲ್ ವಿಜಯಕುಮಾರ್ (ಹೊಸದುರ್ಗ):–

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸರ್ಕಾರದ ವತಿಯಿಂದ 1990-91ನೇ ಸಾಲಿಗೆ ಸಾಲ ಮನ್ನಾ ಯೋಜನೆ ಜಾರಿಗೆ ಬಂದಿದ್ದು ನಿಜವಲ್ಲವೆ;

ಆ. ಹಾಗಿದ್ದಲ್ಲಿ ಹೊಸದುರ್ಗ ಭೂ ಅಭಿವೃದ್ಧಿ ಬ್ಯಾಂಕು ಈ ಕಾರ್ಯಕ್ರಮವನ್ನು ಜಾರಿಗೆ ತಂದಿದೆಯೇ ? ಅಥವಾ ಜಾರಿಗೆ ತಂದಿಲ್ಲವೇ;

ಇ. ಅರ್ಹ ಫಲಾನುಭವಿಗಳನ್ನು ಗುರುತಿಸಲು ಹಾಗೂ ಸಾಲ ಮನ್ನಾ ಮಾಡಲು ಬ್ಯಾಂಕು ಅಧಿಕಾರಿಗಳು ವಿಫಲರಾಗಿದ್ದಾರೆ ? ಇದಕ್ಕೆ ಕಾರಣಗಳೇನು ಹಾಗೂ ಪರಿಹಾರವೇನು;

ಈ. ಇಂತಹ ಪ್ರಕರಣಗಳು ಬೇರೆ ಬ್ಯಾಂಕುಗಳಲ್ಲಿ ನಡೆದಿದೆಯೇ ? ನಡೆದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು;

ಉ. ಸರ್ಕಾರದ ಕಾರ್ಯಕ್ರಮವನ್ನು ಜಾರಿಗೆ ತರದ ಬ್ಯಾಂಕ್ ಅಧಿಕಾರಿಗಳ ಬಗ್ಗೆ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ಹೌದು

ಆ. ತಂದಿದೆ.

ಇ. ಇಲ್ಲ, ಆದಾಗ್ಯೂ ಬ್ಯಾಂಕು ಅಧಿಕಾರಿಗಳು ಏಳು ಜನ ಫಲಾನುಭವಿಗಳನ್ನು ಗುರುತಿಸುವಲ್ಲಿ ಹಾಗೂ ಅವರ ಸಾಲ ಮನ್ನಾ ಮಾಡುವಲ್ಲಿ ಕಣ್ ತಪ್ಪಿನಿಂದ ವಿಫಲರಾಗಿದ್ದುದು ನಿಜವಾಗಿರುತ್ತದೆ. ಯೋಜನೆಯು ಅಸ್ತಿತ್ವದಲ್ಲಿ ಇಲ್ಲವಾದ್ದರಿಂದ ಯಾವುದೇ ಪರಿಹಾರ ಈಗ ನೀಡಲು ಸಾಧ್ಯವಿಲ್ಲ.

ಈ. ನಡೆದಿರುವುದು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಉ. ಬ್ಯಾಂಕ್ ಅಧಿಕಾರಿಗಳು ರಾಜ್ಯ ಬ್ಯಾಂಕಿನ ಪ್ರಾಧಿಕಾರದ ಕಾರ್ಯವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದು ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲು ಆದೇಶಿಸಲಾಗುವುದು.

ಭೂಸ್ವಾಧೀನ ಕಾಯಿದೆಯಿಂದ ರೈತರಿಗೆ ತೊಂದರೆ.

325 (1692): ಶ್ರೀ ವೈ. ಎಂ. ವೀರಣ್ಣ (ದಾವಣಗೆರೆ):-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಭೂಸ್ವಾಧೀನ ಕಾಯ್ದೆಯಿಂದ ರೈತರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಸರ್ಕಾರ ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿವೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):-

ಅ. ಹೌದು.

ಆ. ಸರ್ಕಾರ ಈ ಕೆಳಕಂಡಂತೆ ಸೂಕ್ತ ಕ್ರಮ ತೆಗೆದುಕೊಂಡಿದೆ.

1. ಭೂಮಾಲೀಕರಿಗೆ ಶೀಘ್ರವೇ ಪರಿಹಾರ ಕೊಡುವುದರ ಸಲುವಾಗಿ ಸರ್ಕಾರವು ಭೂಸ್ವಾಧೀನ ನಡವಳಿಗಳನ್ನು ನಿಗದಿತ ವೇಳೆಯಲ್ಲಿ ಪೂರ್ತಿ ಮಾಡುವುದಕ್ಕೆ ವೇಳಾ ಪಟ್ಟಿಯನ್ನು ಹೊರಡಿಸಿದೆ.

2. ಭೂಮಾಲೀಕರಿಗೆ ಯೋಗ್ಯ ಮಾರುಕಟ್ಟೆ ಬೆಲೆಯನ್ನು ನೀರಿದಂತೆ ಶೇ. 30 ಸೋಲೇಶಿಯಂ ಹಾಗೂ ಶೇ 12 ಹೆಚ್ಚುವರಿ ಹಣವನ್ನು ಕೊಡಲಾಗುತ್ತಿದೆ. ಇದಲ್ಲದೆ ಮರಮಟ್ಟುಗಳಿಗೆ ಪ್ರತ್ಯೇಕವಾಗಿ ಬೆಲೆಯನ್ನು ಸಹ ಕೊಡಲಾಗುತ್ತಿದೆ.

3. ಸರ್ಕಾರವು ದಿನಾಂಕ: 3.9.92ರ ಸಭೆಯಲ್ಲಿ ಎಲ್ಲಾ ಭೂಸ್ವಾಧೀನಾಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚನೆಗಳನ್ನು ನೀಡುತ್ತಾ ಪರಿಹಾರ ಹಣವನ್ನು ಯಾವುದೇ ರೀತಿ ವಿಳಂಬ ಮಾಡದೇ ತುರ್ತಾಗಿ ಕೊಡಬೇಕಾಗಿ ಸೂಚನೆ ಕೊಡಲಾಗಿದೆ.

4. ಅವಶ್ಯಕತೆ ಇದ್ದ ಕಡೆ ಪುನರ್ವಸತಿಯನ್ನು ಸರ್ಕಾರ ಮಾಡುತ್ತಿದೆ.

ಮೈಸೂರು ಜಿಲ್ಲೆಯಲ್ಲಿ ಹಂಚಲಾದ ದರಖಾಸ್ತು ಜಮೀನುಗಳ ವಿವರ.

326 (1573): ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1987 ರಿಂದ ಮೈಸೂರು ಜಿಲ್ಲೆಯಲ್ಲಿ ಎಷ್ಟು ಎಕರೆ ಜಮೀನನ್ನು ದರಖಾಸ್ತು ಮೂಲಕ ಹಂಚಲಾಗಿದೆ (ವಿವರ ನೀಡುವುದು);

ಅ. ಅವರಲ್ಲಿ ಹರಿಜನ ಗಿರಿಜನರ ಸಂಖ್ಯೆ ಎಷ್ಟು (ವಿಳಾಸ ಹಾಗೂ ಹೆಸರುಗಳ ವಿವರ ನೀಡುವುದು);

ಇ. ದರಖಾಸ್ತು ಉಳಿಕೆ ಎಷ್ಟು ಜಮೀನು ಹಂಚಬೇಕಾಗಿದೆ;

ಈ. ದರಖಾಸ್ತು ಜಮೀನು ಹಂಚಿದೆ ಉಳಿದಿರುವ ತಾಲ್ಲೂ ಕುಗಳಾವುವು (ವಿವರ ನೀಡುವುದು) ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ. 1,440-07 ಎಕರೆಗಳು.

ಆ. 545 ಜನರು.

ಇ. ಇಲ್ಲ.

ಈ. ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ. ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):- ಮಾನ್ಯ ಅಧ್ಯಕ್ಷರೇ, 11.3.93ರಂದು ಸದನದಲ್ಲಿ ಲಿಖಿತ ಮೂಲಕ ಉತ್ತರಿಸುವ ಪಟ್ಟಿಯಲ್ಲಿರುವ 67 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ, 1525, 1568, 1921, 1222, 1274, 1095, 1224, 1226, 1959, 1619, 1148, 1138, 1379, 1380, 1129ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 52 ಚುಕ್ಕಿ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಹನಿ ಮತ್ತು ತುಂತುರು ನೀರಾವರಿ ಯೋಜನೆಯಿಂದ ರೈತರಿಗೆ ಸಿಗುವ ಸಹಾಯಧನ

1036 (1459): ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು):-

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹನಿ ಮತ್ತು ತುಂತುರು ನೀರಾವರಿ ಯೋಜನೆಗಳನ್ನು ವೈಯುಕ್ತಿಕವಾಗಿ ಅಳವಡಿಸಲು ರೈತರಿಗೆ ಸರ್ಕಾರದ ಸಹಾಯ ಧನದ ಬಗ್ಗೆ ಇರುವ ನೀತಿ ನಿಯಮಗಳು ಏನು ?

ಆ. ಹನಿ ಮತ್ತು ತುಂತುರು ನೀರಾವರಿ ಅತಿ ಅವಶ್ಯಕ ಮತ್ತು ಲಾಭದಾಯಕ ಎನ್ನುವುದನ್ನು ಸರ್ಕಾರ ಗಮನಿಸಿದೆಯೇ ?

ಇ. ವೈಜ್ಞಾನಿಕವಾಗಿ ಲಾಭದಾಯಕ ಕೃಷಿ ಉತ್ಪಾದನೆ ಹಾಗೂ ಕಡಿಮೆ ನೀರಿನ ಬಳಕೆಯ ಈ ಯೋಜನೆಗಳಿಗೆ ಹೆಚ್ಚಿನ ಸಹಾಯಧನ ನೀಡುವುದು ಅವಶ್ಯ ಇದೆ ಎನ್ನುವುದನ್ನು ಸರ್ಕಾರವು ಯೋಚಿಸಿದೆಯೇ ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):-

ಅ. ಹನಿ ನೀರಾವರಿ ಪದ್ಧತಿಯನ್ನು 1 ರಿಂದ 10 ಎಕರೆ ಅನುಮೋದಿತ ತೋಟಗಾರಿಕೆ ಬೆಳೆಗಳಲ್ಲಿ ಅನುಮೋದಿತ ಹನಿ ನೀರಾವರಿ ತಯಾರಕ : ವಿತರಕ, ಸಂಸ್ಥೆಗಳಿಂದ ಅಳವಡಿಸುವ ಯಾವುದೇ ವರ್ಗದ ರೈತರಿಗೆ ಶೇಕಡ 50 ರಷ್ಟು ಹಾಗೂ ಹೆಚ್ಚಿನ ಅಥವಾ ಗರಿಷ್ಠ 50 ಸಾವಿರ ರೂಪಾಯಿಗಳ

ಸಹಾಯ ಧನವನ್ನು ಇಲಾಖೆವತಿಯಿಂದ ನೀಡಲಾಗುವುದು. ಈ ಯೋಜನೆ 1992–93ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸಹಾ ಅನುಷ್ಠಾನಗೊಳಿಸಲಾಗುತ್ತಿದೆ.

ತುಂತುರು ನೀರಾವರಿ ಯೋಜನೆಯನ್ನು 1992–93ನೇ ಸಾಲಿನಲ್ಲಿ ಸಾಂಬಾರು ಮಂಡಳಿ ಮತ್ತು ರಾಜ್ಯ ಸರ್ಕಾರದ (50:50) ಆರ್ಥಿಕ ಸಹಾಯದೊಂದಿಗೆ ಧಾರವಾಡ ಜಿಲ್ಲೆಯಲ್ಲಿ ಬ್ಯಾಡಗಿ ಮೆಣಸಿನಕಾಯಿ ಬೆಳೆಗೆ ತುಂತುರು ನೀರಾವರಿ ಪದ್ಧತಿ ಅಳವಡಿಸಲು 10 ಲಕ್ಷ ರೂ.ಗಳ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಡಿಯಲ್ಲಿ 1 ರಿಂದ 10 ಎಕರೆ ಬ್ಯಾಡಗಿ ಮೆಣಸಿನಕಾಯಿ ಬೆಳೆಯುವ ಪ್ರದೇಶದಲ್ಲಿ ತುಂತುರು ನೀರಾವರಿ ಅಳವಡಿಸುವ ರೈತರಿಗೆ ಶೇಕಡಾ 50ರಷ್ಟು ಘಟಕ ವೆಚ್ಚ ಸಹಾಯ ಧನವನ್ನಾಗಿ ನೀಡಲಾಗುವುದು. ತುಂತುರು ನೀರಾವರಿ ಪದ್ಧತಿಯನ್ನು ರೈತರು ಕರ್ನಾಟಕ ಸರಕು ಖರೀದಿ ಇಲಾಖೆಯಿಂದ ಅನುಮೋದಿತವಾದ ಸಂಸ್ಥೆಗಳಿಂದ ಅಳವಡಿಸಬೇಕು.

ಆ. ಹೌದು.

ಇ. ಹೌದು.

ಸರ್ಕಾರದ ಜಮೀನು ಬಗರ್ ಹುಕುಂ ಸಾಗುವಳಿ ಮಾಡಿರುವವರು ಅರ್ಜಿ ಹಾಕಿಕೊಳ್ಳಲು ಕಾಲಾವಧಿ ವಿಸ್ತರಣೆ.

1037 (20): ಶ್ರೀ ಎ. ಪಿ. ಉಮಾಪತಿ (ಹೊಳಲ್ಕೆರೆ):–

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಜಮೀನುಗಳನ್ನು ಸಕ್ರಮಗೊಳಿಸಲು ಅರ್ಜಿ ಹಾಕಿಕೊಳ್ಳಲು ಸರ್ಕಾರ ಒಂದು ತಾರೀಖು ನಿಗದಿ ಪಡಿಸಿದ್ದು ಅನೇಕ ಕಾರಣಗಳಿಂದ ಬಹುತೇಕ ಜನರು ಸಕಾಲದಲ್ಲೂ ಅರ್ಜಿ ಹಾಕಿಕೊಳ್ಳದೆ ಈಚೆಗೆ ಅರ್ಜಿಗಳು ಬಂದಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಅಂತಹ ಕಾಲಾತೀತವಾಗಿ ಬಂದಿರುವ ಅರ್ಜಿಗಳಿಗೆ ಪುರಸ್ಕಾರ ದೊರೆಯಿಡೆ ಪ್ರಸ್ತುತ ಸಾಗುವಳಿ ಮಾಡಿರುವವರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಈ ರೀತಿ ಕಾಲವಿಳಂಬವಾಗಿ ಬಂದಿರುವ ನ್ಯಾಯವಾದ ಅರ್ಜಿಗಳನ್ನು ಪುರಸ್ಕರಿಸುವಂತೆ ಸಂಬಂಧಪಟ್ಟ ಕಂದಾಯ ಇಲಾಖಾ ಅಧಿಕಾರಿಗಳಿಗೆ ಆದೇಶ ಹೊರಡಿಸುವ ಯೋಜನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಆ. ಹೌದು.

ಆ. ಅನ್ಯಾಯವಾಗಿದೆ ಎಂದು ಹೇಳಿರುವ ಪ್ರಶ್ನೆ ಉದ್ಭವಿಸುವುದಿಲ್ಲ. ಕಾರಣ, ಅರ್ಜಿಗಳನ್ನು ಸಲ್ಲಿಸಲು ಸಾಕಷ್ಟು ಪ್ರಚಾರ ಕಾಲಾವಕಾಶಗಳನ್ನು ನೀಡಲಾಗಿತ್ತು. ಆದಾಗ್ಯೂ ಅಂತಹ ವ್ಯಕ್ತಿಗಳು ನಿಗದಿತ ಕಾಲದಲ್ಲಿ ಅರ್ಜಿಗಳನ್ನು ಸಲ್ಲಿಸದೇ ಸರ್ಕಾರವನ್ನು ದೂಷಿಸುವುದು ಸೂಕ್ತವಲ್ಲ.

ಇ. ಇಲ್ಲ.

ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ರಾಜ್ಯದಲ್ಲಿ ನಡೆಸುತ್ತಿರುವ ದೇವಸ್ಥಾನಗಳು

1039 (46): ಕೆ. ಹರ್ಷಕುಮಾರಗೌಡ (ಚಾಮರಾಜ):-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಒಟ್ಟು ದೇವಸ್ಥಾನಗಳೆಷ್ಟು;

ಆ. ಈ ದೇವಸ್ಥಾನಗಳಲ್ಲಿ ಹೆಚ್ಚಿನ ಆದಾಯ ಬರುವ ದೇವಸ್ಥಾನಗಳಾವುವು;

ಇ. ಈ ದೇವಸ್ಥಾನಗಳಿಗಾಗುವ ವರ್ಷದ ಖರ್ಚೆಷ್ಟು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ. ಒಟ್ಟು 37,778 ದೇವಾಲಯಗಳು ಇವೆ.

ಆ. ಹೆಚ್ಚಿನ ಆದಾಯ ಬರುವ ದೇವಸ್ಥಾನಗಳ ಪಟ್ಟಿಯನ್ನು ಅನುಬಂಧ 'ಅ'ನಲ್ಲಿ ತೋರಿಸಿದೆ.

ಇ. ಖರ್ಚಿನ ವಿವರ ಅನುಬಂಧ 'ಅ' ನಲ್ಲಿದೆ.

ವಾರ್ಷಿಕ ರೂ. 20.00 ಲಕ್ಷಕ್ಕಿಂತ ಅಧಿಕ ಆದಾಯ ಇರುವ ದೇವಾಲಯಗಳ ತಖ್ತೆ:

ಕ್ರ. ಸಂ.	ದೇವಾಲಯದ ಹೆಸರು	ಆದಾಯ	ವೆಚ್ಚ
1.	ಶ್ರೀ ಬನಶಂಕರಿ ದೇವಾಲಯ, ಬೆಂಗಳೂರು (ನಗರ) ಜಿಲ್ಲೆ	ರೂ. 20,30,823.00	7,55,904.00
2.	ಶ್ರೀ ಮಲೈ ಮಹದೇಶ್ವರಸ್ವಾಮಿ ಮಹದೇಶ್ವರ ಬೆಟ್ಟ, ಕೊಳ್ಳೇಗಾಲ ತಾಲ್ಲೂಕು, ಮೈಸೂರು ಜಿಲ್ಲೆ	1,34,73,369.00	1,03,13,865.00
3.	ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು, ಮೈಸೂರು ಜಿಲ್ಲೆ.	58,85,503.00	30,67,653.00
4.	ಶ್ರೀ ಚಾಮುಂಡೇಶ್ವರಿ ದೇವಾಲಯ ಚಾಮುಂಡಿಬೆಟ್ಟ, ಮೈಸೂರು ಜಿಲ್ಲೆ	51,57,812.00	26,43,275.00
5.	ಶ್ರೀ ಸಿದ್ದಲಿಂಗೇಶ್ವರಸ್ವಾಮಿ ದೇವಸ್ಥಾನ, ಎಡೆಯೂರು, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ	41,87,640.00	35,80,190.00
6.	ಶ್ರೀ ಕುಕ್ಕೆ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಸುಬ್ರಹ್ಮಣ್ಯ, ಸುಳ್ಯ ತಾ: ದಕ್ಷಿಣ ಕನ್ನಡ ಜಿಲ್ಲೆ.	1,33,56,562.00	53,68,620.99
7.	ಶ್ರೀ ಮೂಕಾಂಬಿಕಾ ದೇವಾಲಯ ಕೊಲ್ಲೂರು, ಕುಂದಾಪುರ ತಾ:	1,19,80,752.75	61,96,702.38

8.	ಶ್ರೀ ದುರ್ಗಾಪರಮೇಶ್ವರಿ ದೇವಾಲಯು ಕಟೀಲು, ಮಂಗಳೂರು ತಾಲ್ಲೂಕು	1,23,70,894.50	1,15,12,334.40
9.	ಶ್ರೀ ಆನೆಗುಡ್ಡೆ ವಿನಾಯಕ ದೇವರು ಕುಂದಾಪುರ ತಾಲ್ಲೂಕು	35,34,300.69	32,30,823.20
10.	ಶ್ರೀ ಮಂದಾರ್ತಿ ದುರ್ಗಾಪರಮೇಶ್ವರಿ ದೇವಾಲಯ, ಹೆಗ್ಗುಂಜೆ, ಉಡುಪಿ ತಾ:	20,18,030.00	18,85,950.00
11.	ಶ್ರೀ ಕದ್ರಿ ಮಂಜುನಾಥ ದೇವಾಲಯು ಮಂಗಳೂರು ತಾಲ್ಲೂಕು	35,33,680.40	29,43,077.90
12.	ಶ್ರೀ ಮಹಾಲಿಂಗೇಶ್ವರ ದೇವಾಲಯು, ಪುತ್ತೂರು ತಾಲ್ಲೂಕು	40,96,893.00	37,45,000.00
13.	ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಾಲಯು, ಅಂಬಲಪಾಡಿ, ಉಡುಪಿ ತಾಲ್ಲೂಕು	34,12,481.63	27,42,831.93

1984ನೇ ಸಾಲಿನಿಂದ ಬೀದರ್ ಜಿಲ್ಲೆಯಲ್ಲಿ ಸ್ಥಾಪಿಸಲಾದ ಜೈವಾನಿಲ ಸ್ಥಾವರಗಳ ಸಂಖ್ಯೆ

1040 (1436): ಶ್ರೀ ನಾರಾಯಣರಾವ್ (ಮನವಳ್ಳಿ–ಬೀದರ್):–

ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1984ನೇ ಸಾಲಿನಿಂದ ಬೀದರ್ ಜಿಲ್ಲೆಯಲ್ಲಿ ಸ್ಥಾಪಿಸಲಾದ ಜೈವಾನಿಲ ಸ್ಥಾವರಗಳ ಸಂಖ್ಯೆ;

ಆ. ಅವುಗಳಲ್ಲಿ ಎಷ್ಟು ಕಾರ್ಯ ನಿರ್ವಹಿಸುತ್ತಿವೆ;

ಇ. ಸರ್ಕಾರವು ಈ ಬಗ್ಗೆ ಅತ್ಯಾವಶ್ಯಕವೆಂದು ಭಾವಿಸಿದಲ್ಲಿ, ಸರ್ಕಾರದ ಮುಂದಿನ ನೀತಿ ಏನು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ. 1984-85ನೇ ಸಾಲಿನಿಂದ ಜನವರಿ 93ರ ಅಂತ್ಯದವರೆಗೆ 529 ಜೈವಾನಿಲ ಘಟಕಗಳನ್ನು ಸ್ಥಾಪಿಸಲಾಗಿದೆ.

ಆ. ಅವುಗಳಲ್ಲಿ 264 ಸ್ಥಾವರಗಳು ಕಾರ್ಯ ನಿರ್ವಹಿಸುತ್ತಿವೆ.

ಇ. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯು ರಾಷ್ಟ್ರೀಯ ಕಾರ್ಯಕ್ರಮವಾಗಿದೆ. ಈ ಯೋಜನೆಯು ಗ್ರಾಮೀಣ ಪ್ರದೇಶದ ಬಹುತೇಕ ಸಂಖ್ಯೆಯ ಕುಟುಂಬಗಳಿಗೆ ಅಡಿಗೆಗೆ ಬೇಕಾದ ಉರುವಲನ್ನು ಒದಗಿಸುವಲ್ಲಿ ಉಪಯುಕ್ತವಾಗಿದೆ. ವಿಫಲವಾಗಿರುವ ಸ್ಥಾವರಗಳು ಭಾಗ್ಯಲಕ್ಷ್ಮಿ ಮಾದರಿಗೆ ಸೇರಿದವಾಗಿವೆ. ದಿನಾಂಕ 1.2.1985ರಿಂದ ಈ ಮಾದರಿಯ ಪ್ರಚಾರವನ್ನು ನಿಲ್ಲಿಸಲಾಗಿದೆ. ಆದಾಗ್ಯೂ ಇತರೆ ಮಾದರಿಗಳಾದ, ದೀನ ಬಂಧು ಮತ್ತು ಕೆ.ವಿ.ಐ.ಸಿ. ತೇಲುವ ಮಾದರಿ ಡ್ರಂಗಳು ಸಮರ್ಪಕವಾಗಿ ಸೇವೆಯನ್ನು ನಿರ್ವಹಿಸುತ್ತಿವೆ. ಭಾಗ್ಯಲಕ್ಷ್ಮಿ ಸ್ಥಾವರಗಳ ವಿಫಲತೆಯಿಂದ ನೊಂದ ಫಲಾನುಭವಿಗಳ ಕಷ್ಟವನ್ನು ನೀಗಿಸಲು ರಾಜ್ಯ ಸರ್ಕಾರವು 'ಅನಿಲ ಯೋಜನೆ' ಎಂಬ ಯೋಜನೆಯನ್ನು ರೂಪಿಸಿದ್ದು, ಇದರಡಿಯಲ್ಲಿ ಸ್ಥಗಿತಗೊಂಡ ಭಾಗ್ಯಲಕ್ಷ್ಮಿ ಸ್ಥಾವರಗಳನ್ನು ದುರಸ್ತಿ

ಅಥವಾ ಪುನರುತ್ಥಾನಗೊಳಿಸಲು ಗಾತ್ರಾನುಸಾರ ರೂ. 6,000ಗಳವರೆಗೆ ರಿಪೇರಿ ಸಹಾಯಧನ ನೀಡಲು ಅವಕಾಶವಿದೆ.

ರಾಜ್ಯ ಸರ್ಕಾರವು ಯಾವುದೇ ನೀತಿ ಮಾಡಿದಲ್ಲಿ ಅದು ಕೇಂದ್ರ ಸರ್ಕಾರದ ನೀತಿಯೊಂದಿಗೆ ಹೊಂದಾಣಿಕೆ ಇರಬೇಕಾಗುತ್ತದೆ. 8ನೇ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಈ ಯೋಜನೆಯು ಹೆಚ್ಚಿನ ಗುರಿ ಸಾಧಿಸುವ ದಿಶೆಯಲ್ಲಿರುತ್ತದೆ.

ಬೀದರ್ ಜಿಲ್ಲೆಯಲ್ಲಿ 1991-92ನೇ ಸಾಲಿನಲ್ಲಿ ಜವಾಹರ್ ರೋಜಗಾರ್ ಯೋಜನೆ.

1042 (1229): ಶ್ರೀ ನಾರಾಯಣರಾವ್ ಮನವಳ್ಳಿ (ಬೀದರ್):-

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೀದರ್ ಜಿಲ್ಲೆಯಲ್ಲಿ 1991-92ನೇ ಸಾಲಿನಲ್ಲಿ ಜವಾಹರ್ ರೋಜಗಾರ್ ಯೋಜನೆಯಡಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು);

ಆ. ಈ ಕಾಮಗಾರಿಗಳಿಂದ ಲಾಭ ಪಡೆದ ಕಾರ್ಮಿಕರ ಸಂಖ್ಯೆ ಎಷ್ಟು;

ಇ. ಒಟ್ಟು ಖರ್ಚು ಮಾಡಿದ ಹಣ ಎಷ್ಟು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ಯ ಸಚಿವರು):-

1. ಬೀದರ್ ಜಿಲ್ಲೆಯಲ್ಲಿ 1991-92ನೇ ಸಾಲಿನಲ್ಲಿ ಜವಾಹರ್ ರೋಜಗಾರ್ ಯೋಜನೆಯಡಿಯಲ್ಲಿ ತೆಗೆದುಕೊಂಡು ಒಟ್ಟು ಕಾಮಗಾರಿಗಳ ಸಂಖ್ಯೆ 3064.

2. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

ತಾಲ್ಲೂಕು	ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ:
ಔರಾದ್	629
ಬೀದರ್	516
ಭಾಲ್ಕಿ	664
ಬಸವಕಲ್ಯಾಣ	520
ಹುಮನಾಬಾದ್	691
ಒಟ್ಟು	3064

ಆ. 13,802

ಇ. ರೂ. 380.709 ಲಕ್ಷಗಳು.

ರಿಕಾರ್ಡ್ ಆಫ್ ರೈಟ್ಸ್‌ನ ಬದಲಾವಣೆಯಲ್ಲಿ ವಿಳಂಬ

1044 (1822): ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) -

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಿಕಾರ್ಡ್ ಆಫ್ ರೈಟ್ಸ್‌ನಲ್ಲಿ ಬದಲಾವಣೆ ಮಾಡುವ ಬಗ್ಗೆ ಸಾಕಷ್ಟು ತಡವಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ; ಮತ್ತು ಗ್ರಾಮದ ಹಂತದಲ್ಲಿ ಪಹಣಿ ಕಾಪಿಯನ್ನು ಕೊಡಲು ಲಂಚ ಪಡೆಯಲಾಗುತ್ತಿದೆಯೇ;

ಆ. ಚನ್ನಪಟ್ಟಣ ತಾಲ್ಲೂಕಿನಲ್ಲಿ, ವೃದ್ಧಾಪ್ಯ ವೇತನ, ವಿಧವಾ ವೇತನ ಮತ್ತು ಅಂಗವಿಕಲರ ವೇತನವನ್ನು ಕೊಡುವುದರಲ್ಲಿ ಮತ್ತು ಪಹಣಿ ಕಾಪಿ, ಪ್ರಕೃತಿ ವಿಕೋಪದ ಪರಿಹಾರ ನೀಡುವುದರಲ್ಲಿ ತಡವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಮೇಲ್ಕಂಡ ಕೆಲಸಗಳನ್ನು ಜಾಗ್ರತೆಯಾಗಿ ವಿಲೇ ಮಾಡುವುದರಲ್ಲಿ ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ;

ಈ. ಚನ್ನಪಟ್ಟಣ ತಾಲ್ಲೂಕು, ವಿರೂಪಾಕ್ಷಿಪುರ ನಾಡ ಕಛೇರಿಯಲ್ಲಿ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನಗಳ ಬಾಕಿ ಇರುವ ಒಟ್ಟು ಪ್ರಕರಣಗಳೆಷ್ಟು ? (ವಿವರವನ್ನು ಒದಗಿಸುವುದು)

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಮಂತ್ರಿಗಳು):–

ಅ. ಇಲ್ಲ.

ಆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ, ಆರ್‌ಟಿಸಿ, ಹಾಗೂ ಪ್ರಕೃತಿ ವಿಕೋಪದಿಂದ ನೊಂದವರಿಗೆ ಕೊಡಬೇಕಾದ ಮಂಜೂರಾತಿಯಲ್ಲಿ ಅನಗತ್ಯ ವಿಳಂಬವಾಗುತ್ತಿರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. 1.3.93ರಲ್ಲಿ ಈ ಕೆಳಕಂಡ ಪ್ರಕರಣಗಳು ವಿರೂಪಾಕ್ಷಿಪುರ ನಾಡ ಕಛೇರಿಯಲ್ಲಿ ಬಾಕಿ ಇರುತ್ತವೆ.

ವೃದ್ಧಾಪ್ಯ ವೇತನ	– 19
ಅಂಗವಿಕಲ ವೇತನ	– 01
ವಿಧವಾ ವೇತನ	– 08
ಒಟ್ಟು	– 28

ಕೃಷಿ ಇಲಾಖೆಯಲ್ಲಿನ ನೇಮಕಾತಿ ಹೊಂದಿರುವ ಕೃಷಿ ಸಹಾಯಕರು.

1045 (1395): ಶ್ರೀ ಬಿ. ಐ. ಪಾಟೀಲ್, (ಉಚ್ಚಗಾಂವ್):–

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೃಷಿ ಇಲಾಖೆಯಿಂದ ಹಾಗೂ ವಿಭಾಗಾಧಿಕಾರಿಗಳಿಂದ ನೇಮಕಾತಿ ಹೊಂದಿದ ಕೃಷಿ ಸಹಾಯಕರ ಸಂಖ್ಯೆ ಎಷ್ಟು;

ಆ. ವಿಭಾಗಾಧಿಕಾರಿಗಳಿಂದ ನೇಮಕಾತಿ ಹೊಂದಿದ ಕೃಷಿ ಸಹಾಯಕರು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ

ಕಛೇರಿಗಳ ವ್ಯಾಪ್ತಿಯಲ್ಲಿ ಉಳಿದಿದ್ದಾರೆಯೇ ? ಮತ್ತು ಕೃಷಿ ಇಲಾಖೆಯಿಂದ ನೇಮಕಾತಿ ಹೊಂದಿದ ಕೃಷಿ ಸಹಾಯಕರುಗಳ ಮಾತೃ ಇಲಾಖೆಗೆ ಮರು ವರ್ಗಾವಣೆ ಹೊಂದಿದ್ದಾರೆಯೇ ?

ಇ. ಹಾಗಿದ್ದರೆ ಕಾರಣಗಳೇನು ?

ಈ. ಕೃಷಿ ಇಲಾಖೆಯಿಂದ ಹಾಗೂ ವಿಭಾಗಾಧಿಕಾರಿಗಳಿಂದ ನೇಮಕಾತಿಗೊಂಡ ಕೃಷಿ ಸಹಾಯಕರುಗಳು ಒಂದೇ ರೀತಿಯ ತರಬೇತಿಯನ್ನು ಪಡೆದಿದ್ದಾರೆಯೇ ? ಹಾಗಿದ್ದಲ್ಲಿ ಅವರನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಗಳಲ್ಲಿ ನೇಮಿಸಿ, ಅಲ್ಲಿ ಹೊಸದಾಗಿ ನೇಮಕಾತಿ ಮಾಡುವುದರಿಂದ ಸರ್ಕಾರಕ್ಕೆ ಉಂಟಾಗುವ ಆರ್ಥಿಕ ಹೊರೆಯನ್ನು ತಪ್ಪಿಸಬಹುದಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ. ವಿಭಾಗಾಧಿಕಾರಿಗಳಿಂದ ನೇಮಕವಾದ ಕೃಷಿ ಸಹಾಯಕರುಗಳ (ಗ್ರಾಮ ಸೇವಕರು) ಸಂಖ್ಯೆ: 2600. ಕೃಷಿ ಇಲಾಖೆಯಲ್ಲಿ ಈವರೆಗೆ ನೇಮಕವಾದ ಕೃಷಿ ಸಹಾಯಕರ ಸಂಖ್ಯೆ: 6353.

ಆ. ವಿಭಾಗಾಧಿಕಾರಿಗಳಿಂದ ನೇಮಕವಾದ ಕೃಷಿ ಸಹಾಯಕರು (ಗ್ರಾಮ ಸೇವಕರು) ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ವ್ಯಾಪ್ತಿಯಲ್ಲಿಯೇ ಉಳಿದಿದ್ದು, ಕೃಷಿ ಇಲಾಖೆಯಲ್ಲಿ ನೇಮಕಗೊಂಡ ಕೃಷಿ ಸಹಾಯಕರು, ಕೃಷಿ ಇಲಾಖೆಯ ವ್ಯಾಪ್ತಿಯಲ್ಲಿಯೇ ಉಳಿದಿದ್ದಾರೆ.

ಇ. ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಈ. ಕೃಷಿ ಇಲಾಖೆಯ ವತಿಯಿಂದ ನೇಮಕಗೊಂಡ ಕೃಷಿ ಸಹಾಯಕರಿಗೂ ವಿಭಾಗಾಧಿಕಾರಿಗಳಿಂದ ನೇಮಕಾತಿಗೊಂಡ ಕೃಷಿ ಸಹಾಯಕರಿಗೂ ನೀಡಿದ ತರಬೇತಿಯಲ್ಲಿ ವ್ಯತ್ಯಾಸವಿರುವ ಪ್ರಯುಕ್ತ, ಕೃಷಿ ಇಲಾಖೆಯಲ್ಲಿ ನೇಮಕಗೊಂಡ ಕೃಷಿ ಸಹಾಯಕರನ್ನು ಅಭಿವೃದ್ಧಿ ಇಲಾಖೆಗೆ ವರ್ಗಾಯಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ಸಿಬ್ಬಂದಿ

1046 (1405): ಶ್ರೀ ಕೆ. ಸಿದ್ದಯ್ಯ:–

1. ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ? (ವೃಂದವಾರು ಮಾಹಿತಿ ಒದಗಿಸುವುದು);

2. ಅವರುಗಳಲ್ಲಿ ಅರ್ಚಕರು ಮತ್ತು ಆಗಮಿಕರ ಒಟ್ಟು ಸಂಖ್ಯೆ (ಪ್ರತ್ಯೇಕ ವಿವರ ನೀಡುವುದು);

3. ಅವರುಗಳಲ್ಲಿ ಹಿಂದುಳಿದ ಜಾತಿಯ, ಪರಿಶಿಷ್ಟ ಜಾತಿಯವರು ಇದ್ದಾರೆಯೇ ? ಇದ್ದಲ್ಲಿ ಸಂಖ್ಯೆ ಎಷ್ಟು;

4. ಈ ದೇವಾಲಯದ ನೌಕರರಿಗೆ ವರ್ಷಕ್ಕೆ ಕೊಡುತ್ತಿರುವ ಒಟ್ಟು ಸಂಬಳ ಎಷ್ಟು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

1. ಈ ದೇವಾಲಯದಲ್ಲಿ ಒಟ್ಟು 155 ಮಂದಿ ಸೇವೆ ಸಲ್ಲಿಸುತ್ತಿದ್ದಾರೆ. (ವೃಂದವಾರು ಪಟ್ಟಿ ಲಗತ್ತಿಸಿದೆ).

2. 6 ಜನ ಅರ್ಚಕರು ಮತ್ತು ಒಬ್ಬ ಆಗಮಿಕರು ಈ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದಾರೆ.

3. ಈ ದೇವಾಲಯದ ಒಟ್ಟು 155 ನೌಕರರ ಪೈಕಿ ಪರಿಶಿಷ್ಟ ಜಾತಿಯವರು 3 ಜನ ಹಾಗೂ ಹಿಂದುಳಿದ ಜಾತಿಯವರು 54 ಜನ ಕೆಲಸ ಮಾಡುತ್ತಿದ್ದಾರೆ.

4. ವರ್ಷಕ್ಕೆ ರೂ. 10,90,771.00 ನ್ನು ಈ ದೇವಾಲಯದ ನೌಕರರಿಗೆ ವೇತನವಾಗಿ ಪಾವತಿ ಮಾಡಲಾಗುತ್ತಿದೆ.

ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ, ನಂಜನಗೂಡು, ವೇತನ ಪರಿಷ್ಕರಣದ

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 348 ಎಂಇಡಿ 89, ದಿನಾಂಕ:28.1.1990.

ಸಂ.	ಹುದ್ದೆಗಳು	ಹುದ್ದೆಗಳ ಸಂಖ್ಯೆ	ಹಾಲಿ ಈಗಿರುವ ವೇತನ	ಪರಿಷ್ಕರಿಸಲು ಉದ್ದೇಶಿಸಿರುವ ವೇತನ	ಷರಾ
			ಪೂರ್ಣಾವಧಿ		
			ನೌಕರರ ಕಛೇರಿ		
೧.	ಹೆಡ್ ಗುಮಾಸ್ತ	1	630-20-650-25-800-30-950-50-1200	1160-30-1400-2150	ಶೇ. 25 ಡಿ.ಎ.
೨.	ದಿನಸಿ ಗುಮಾಸ್ತ	1	ಪ್ರತಿಯೊಬ್ಬರಿಗೂ 490-15-550-20-650-25-800-30-950	ಪ್ರತಿಯೊಬ್ಬರಿಗೂ 940-20-1100-30-1400-40-1720	
3.	ಬೊಕ್ಕಸದ ಗುಮಾಸ್ತ	1	–"–	–"–	
4.	ಮುನ್ಷಿ	1	–"–	–"–	
5.	ಸರಾಫ್	1	–"–	–"–	
			2 ಪೂರ್ಣಾವಧಿ ನೌಕರರು, ದೇವಾಲಯದ ಶಾಖೆ		
6.	ಅಧೀಕ್ಷಕರು		–	ಪ್ರತ್ಯೇಕ ಸೃಷ್ಟಿಸಲಾಗುವುದು	
7.	ಪಾರುಪತ್ತೇಗಾರ	1	765-00	1160-30-1400-2150	ಶೇ. 25 ಡಿ.ಎ.
8.	ಅಗಮಿಕರು	4	725-00	1200-00	
9.	ನಗದಿ ಗುಮಾಸ್ತ	1	460-00	650-00	
10.	ಅರ್ಚಕರು	7	ತಲಾ 450-00	ತಲಾ 650-00	
11.	ಅದಿಖಗಮಣೇಕರ್	1	375-00	500-00	

12. ಸೇವಾರ್ಥ ಮಣೇಗಾರ	1	375-00	506-00
13. ಸ್ವಾನಿಕರು	2	310-00	600-00
14. ಸ್ವಾಮಿ ಸನ್ನಿಧಿ ಹಾಗೂ ಅಮ್ಮನವರ ಸನ್ನಿಧಿ ಪರಿಚಾರಕರು	4	ತಲಾ 450-00	630-00
15. ಶ್ರೀಪಾದ	15	ತಲಾ 340-00	ತಲಾ 460-00
16. ತಾಂಡವೇಶ್ವರ ಸನ್ನಿಧಿ ಪರಿಚಾರಿಕೆ	1	290-00	425-00
17. ಮಾವುತ	1	300-00	425-00
18. ಗಡೇಕಾರ	1	290-00	425-00
19. ಸನ್ನಿಧಿ ಅಡ್ಡಿಗ	1	215-00	301-00
20. ಪಂಚಾಂಗ ಪೌರೋಹಿತ್ಯ	1	445-00	650-00
21. ರಾಜಾಶೀರ್ವಾದ	1	445-00	650-00
22. ಕಾವಲು ಮಣೇಗಾರ	1	445-00	650-00
23. ಕಟ್ಟೆ ಅಡಿಗೆ	2	ತಲಾ 310-00	418-00
24. ಕಾವಲುಗಾರ	10	ತಲಾ 310-00	600-00
25. ಗೊಲ್ಲರು	3	ತಲಾ 225-00	325-00
26. ಜವಾನರು	2	ತಲಾ 310-00	418-00
27. ಮೊಹರಿ	2	ತಲಾ 310-00	ತಲಾ 418-00
28. ಶೃತಿ	1	170-00	255-00
29. ಶೃತಿ	1	100-00	256-00
30. ಡೋಲು	2	ತಲಾ 255-00	ತಲಾ 360-00
31. ಕೈತಾಳ	1	170-00	255-00
32. ಸದ್ರೀವಾಲ	1	375-00	520-00
33. ಕಾಮಾಟಿಗಳು	4	ತಲಾ 370-00	ತಲಾ 500-00
34. ಕಾಮಾಟಿ ಕುಂಕಿ	1	340-00	460-00
35. ಸ್ವೀಪರ್‌ಗಳು	7	ತಲಾ 340-00	ತಲಾ 460-00
36. ದೊಡ್ಡಬಸವೇಶ್ವರ ಪೂಜೆ	1	205-00	300-00
37. ಗಾರ್ಡುಜಮೇದಾರರು	1	495-00	645-00
38. ಪಹರ್ ಪಿಪಾಯಿಗಳು	7	ತಲಾ 445-00	ತಲಾ 600-00
39. ಚಾಮರ	1	80-00	120-00
40 ಚಾಮರ	1	150-00	225-00
41 ಅಥರ್ವಣವೇದ	1	80-00	120-00
42 ಶ್ರೀಗಂಧ	2	ತಲಾ 110-00	ತಲಾ 160-00

43.	ಶ್ರೀಗಂಧ	1	150–00	225–00
44.	ಇತಿಹಾಸ	1	90–00	135–00
45.	ಸ್ಥಳಮಹಾತ್ಮೆ	1	150–00	225–00
46.	ವಸ್ತ್ರ	1	165–00	247–00
47.	ಅಗ್ರೋದಕ	1	105–00	157–00
48.	ಅಗ್ರೋದಕ ಮತ್ತು ನಿವೇದನ	2	ತಲಾ 105–00	ತಲಾ 157–00
49.	ಲಲಿತಾ ಸಹಸ್ರನಾಮ	2	ತಲಾ 100–00	ತಲಾ 150–00
50.	ತುಳಸಿ ಸಹಸ್ರನಾಮ	1	ತಲಾ 105–00	ತಲಾ 175–00
51.	ಸಹಸ್ರನಾಮ	1	105–00	157–00
52.	ಅಷ್ಟೋತ್ತರ	3	ತಲಾ 80–00	ತಲಾ 120–00
53.	ಅಷ್ಟೋತ್ತರ ಸೂಕ್ತ ಪಾರಾಯಣ	1	80–00	120–00
54.	ಲಲಿತಾ ತ್ರಿಶತಿ	1	95–00	142–00
55.	ತುಳಸಿಗಂಧ ಯಜ್ಞೋಪವೀತ	1	120–00	180–00
56.	ತುಳಸಿ	1	80–00	120–00
57.	ಅಶ್ವತ್ಥ ಪ್ರದಕ್ಷಿಣೆ	1	150–00	225–00
58.	ಮಹಾಮಾತೋಶ್ರೀ ಸೇವೆ	1	150–00	225–00
59.	ರಂಗವಲ್ಲಿ	1	150–00	225–00
60.	ನಿವೇದನ ವಿನಿಯೋಗ	1	80–00	120–00
61.	ಕಪಿಲಾ ಸ್ನಾನ	1	150–00	225–00
62.	ಸಾಲು ಅಡ್ಡ	1	95–00	142–00
63.	ಸಾಲು ಅಡ್ಡ	1	150–00	225–00
64.	ಗಾಡಿಕೆ ಮತ್ತು ಹೂವಾಡಿ	1	150–00	225–00
65.	ಪತ್ರೆ ಮತ್ತು ಹೂವಾಡಿ	1	150–00	225–00
66.	ಪತ್ರೆ	1	80–00	120–00
67.	ಪತ್ರೆ	1	150–00	225–00
68.	ಹೂವಾಡಿ	1	80–00	120–00
69.	ತುಂಬೆಹೂವಿನ ದಂಡೆ	1	95–00	200–00
70.	ದೀವಟಿಗೆ	1	150–00	225–00
71.	ದೀವಟಿಗೆ	1	80–00	225–00
72.	ದೀಪದವರು	5	ತಲಾ 80–00	ತಲಾ 120–00
73.	ದೀಪದವರು	2	ತಲಾ 150–00	ತಲಾ 225–00

74.	ಮೃದಂಗ	1	100-00	250-00
75.	ಚಿನ್ನಕಹಳೆ	1	150-00	225-00
76.	ಜಾಗಟೆ	1	80-00	120-00
77.	ಸ್ತೋತ್ರಪಾಠ	1	80-00	120-00
78.	ಗುಂಭಾರ್ತಿ	1	80-00	120-00
79.	ನಗಾರಿ	1	150-00	225-00
80.	ನಗಾರಖಾನೆ ಮೊಹರಿ	2	ತಲಾ 80-00	ತಲಾ 120-00
81.	ನಗಾರಖಾನೆ ಶೃತಿ	1	150-00	225-00
82.	ಮೋಟ (ಐದು ರಥಗಳನ್ನು ಬಟ್ಟೆಗಳನ್ನು ಅಲಂಕರಿಸುವವನು)	1	150-00	225-00
83.	ರುದ್ರತ್ರಿಶತಿ	1	150-00	225-00
84.	ಉಪನಿಷತ್ ಪಾಠ ಮತ್ತು ಸ್ತೋತ್ರ	1	80-00	120-00
85.	ವೇದಪಾಠ ಸ್ತೋತ್ರ	2	ತಲಾ 80-00	ತಲಾ 120-00
86.	ವೇದಪಾಠ ಸ್ತೋತ್ರ	1	150-00	225-00
87.	ಸ್ವಸ್ತಿವಾಚನ	6	ತಲಾ 80-00	ತಲಾ 120-00
88.	ಸ್ವಸ್ತಿವಾಚನ	2	ತಲಾ 150-00	ತಲಾ 225-00
89.	ಉಪನಿಷತ್ ಪಾರಾಯಣ	1	ತಲಾ 150-00	150-00
90.	ಉಪನಿಷತ್ ಪಾರಾಯಣ	2	ತಲಾ 80-00	ತಲಾ 120-00
91.	ಕಜ್ಜಾಯ	1	80-00	120-00
92.	ತುಲಾಭಾರದ ಗಣಪತಿ ಪೂಜೆ	1	80-00	200-00
93.	ಕಟ್ಟಲೆ ಅಡ್ಡೆ	1	150-00	225-00
94.	ವೀಣೆ	1	120-00	180-00
95.	ಪುರಾಣ	1	150-00	225-00
96.	ದವಣೆ	1	150-00	225-00
97.	ಸೂಕ್ತ ಪಾರಾಯಣ (ಅಮ್ಮನವರ ಸನ್ನಿದಿ)	1	70-00	120-00

3. ಪೂರ್ಣಾವಧಿ ನೌಕರರು, ಛತ್ರದ ಶಾಖೆ

98	ಸ್ವಾಗತಕಾರರು	2	ತಲಾ 375-00	ತಲಾ 600-00
99	ಕೌಂಟರ್ ಕ್ಲರ್ಕ್	2	ತಲಾ 375-00	ತಲಾ 600-00
100	ರೂಂಬಾಯ್	5	ತಲಾ 300-00	
101	ನೈಟ್ ವಾಚ್‌ಮನ್	1	300-00	

102.	ಪೌರಕಾರ್ಮಿಕರು	2	ತಲಾ 225-00	ತಲಾ 350-00
103.	ಪೌರಕಾರ್ಮಿಕರು (ವಸತಿ ಗೃಹ)	2	ತಲಾ 180-00	300-00
104.	ಪೌರಕಾರ್ಮಿಕರು (ದೇವಾಲಯದ ಹೊರ ಆವರಣದಲ್ಲಿ)	1	200-00	300-00
105.	ಪಿಡ್ಯೂತ್ ಮತ್ತು ತಾಂತ್ರಿಕ ವರ್ಗ	1	500-00	625-00

5. **ಭತ್ಯ ಮತ್ತು ಅನುದಾನ**

1.	ಹೊರ ಪ್ರಾಕಾರ ಗಣಪತಿ		105-00	200-00 ತಿಂಗಳಿಗೆ
2.	ಜ್ಯೂಬಿಲಿ ರಸ್ತೆ ಗಣಪತಿ ದೇವಸ್ಥಾನ		150-00	225-00 ತಿಂಗಳಿಗೆ
3.	ಪೌರಕಾರ್ಮಿಕ (ಸಾರ್ವಜನಿಕ ಶೌಚಾಲಯ)		45-00	75-00 ತಿಂಗಳಿಗೆ
4.	ಅರಳಿಕಟ್ಟೆ ಆಂಜನೇಯ		75-00	125-00 ತಿಂಗಳಿಗೆ
5.	ಮಾರೀಗುಡಿ ವರ್ಷಾಸನ	48	465-00	800-00 ವರ್ಷಕ್ಕೆ
6.	ಶಂಕರಮಠದ ವರ್ಷಾಸನ		1450-00	2000-00 ವರ್ಷಕ್ಕೆ
7.	ದೇವಾಲಯದ ಪಾತ್ರೆ ತೊಳೆಯುವವರಿಗೆ			160 ಮಾಹಯಾನ
8.	ತೆಂಗಿನಕಾಯಿ ಒಡೆಯುವವರಿಗೆ			150-00 ಮಾಹಯಾನ
9.	ಕುಮುದಾಂಜನೇಯ ದೇವಸ್ಥಾನ		45-00	75-00 ಮಾಹಯಾನ
10.	ದೇವಾಲಯದ ನೌಕರರ ಪೈಕಿ ಯಾರಾದರು ಮೃತಪಟ್ಟರೆ ಅವರ ಕುಟುಂಬದವರಿಗೆ ಪರಿಹಾರ ನಿಧಿ			5000-00
11.	ದೇಡಾಲಯದ ನೌಕರರ ಪೈಕಿ ಯಾರಾದರು ಮೃತಪಟ್ಟರೆ ತಕ್ಷಣ ಪರಿಹಾರದ ಬಗ್ಗೆ			1500-00
12.	ಕಛೇರಿ ಜವಾನರು ಮತ್ತು ಪರದೆ ಸಿಪಾಯಿಗಳಿಗೆ ಕೊಡುತ್ತಿರುವ ಸಮವಸ್ತ್ರದಂತೆ ಈ ಕೆಳಕಂಡವರಿಗೆ ಕೊಡಲು ಉದ್ದೇಶಿಸಿದೆ:			

1. ಗೊಲ್ಲರು	3 ಮಂದಿ	ಹೆಗ್ಗಸರಿಗೆ ಒಂದು	
2. ಕಸಗುಡಿಸುವವರು	7 ಮಂದಿ	ಜೊತೆ ಸೀರೆ	
3. ರೂಂಬಾಯ್‌ಗಳು	5 ಮಂದಿ	ಗಂಡಸರಿಗೆ ಒಂದು	
4. ಪೌರಕಾರ್ಮಿಕರು	5 ಮಂದಿ	ಜೊತೆ ಸಮವಸ್ತ್ರ	
13. ನವಗ್ರಹ ಪೂಜೆ	1		150.00

ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಆಡಳಿತಕ್ಕೆ ಹೊಸದಾಗಿ ಸರ್ಕಾರದ ಆದೇಶದ ಕ್ರಮಾಂಕ ಆರ್.ಡಿ. 111 ಎಂಎಲ್‌ಡಿ 75, ತಾ:24.6.75ರ ಮೇರೆಗೆ ಸೇರಿದ ದೇವಾಲಯಗಳಿಗೆ ನೇಮಿಸಲು ಉದ್ದೇಶಿಸಿರುವ ಹುದ್ದೆಗಳು.

1. ಪರಶುರಾಮರ ದೇವಸ್ಥಾನ

1.	ಅರ್ಚಕರು (ಹುದ್ದೆ ನೇಮಕವಾಗಿದೆ)	1	150.00
2.	ಪರಿಚಾರಕರು	1	125.00
3.	ಕಾವಲುಗಾರ	1	100.00
4.	ತೋಟಗಾರಿಕೆ	1	100.00

2. ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನ

5.	ಅರ್ಚಕರು (ಹುದ್ದೆ ಇದೆ)	1	150.00
6.	ಪರಿಚಾರಕರು (ಹುದ್ದೆ ಇದೆ)	1	125.00
7.	ಕಾವಲುಗಾರ (ಹುದ್ದೆ ಇದೆ)	1	100.00
8.	ತೋಟಗಾರಿಕೆ	1	100.00

3. ಶ್ರೀ ಆರಳಿಕಟ್ಟೆ ಆಂಜನೇಯಸ್ವಾಮಿ ದೇವಸ್ಥಾನ

9.	ಅರ್ಚಕರು	1 ಭತ್ಯೆ ಮತ್ತು ಅನುದಾನದ ಕ್ರಮಾಂಕ 5ರಲ್ಲಿ ಇದೆ.	
10.	ಪರಿಚಾರಕರು	1	125.00

4. ಶ್ರೀ ಗ್ರಾಮದೇವತಾ ಅಮ್ಮನವರ ದೇವಸ್ಥಾನ

11.	ಅರ್ಚಕರು	1	150.00
12.	ಪರಿಚಾರಕ	1	125.00
13.	ಕಾವಲುಗಾರ	1	100.00

ಇದು ಮಂಜೂರಾದ ನಂತರ ಈ ದೇವಾಲಯಕ್ಕೆ ಕೊಡುತ್ತಿರುವ ಅನುದಾನ ನಿಲ್ಲುವುದು.

5. ಶ್ರೀ ಲಿಂಗಾಭಟ್ಟರ ದೇವಸ್ಥಾನ

14.	ಅರ್ಚಕ	1	150.00
15.	ಪರಿಚಾರಕ	1	125.00
16.	ಕಾವಲುಗಾರ	1	100.00
17.	ಕಾವಲುಗಾರ	1	100.00

ದೇವಾಲಯದ ಆಡಳಿತದಲ್ಲಿಯೇ ಇರುವ ದೇವಾಲಯ

		2. ಇಷ್ಟಾರ್ಥ ಸಿದ್ಧಿ ಗಣಪತಿ ದೇವಸ್ಥಾನ ಜ್ಯೂಬಲಿ ರಸ್ತೆ
1. ಅರ್ಚಕರು	1	ಭತ್ಯೆ ಮತ್ತು ಅನುದಾನವಲ್ಲಿನ ಕ್ರಮಾಂಕ 2ರಲ್ಲಿವೆ.
2. ಪರಿಚಾರಕರು	1	125.00
3. ಕಾವಲುಗಾರ	1	100.00
4. ತೋಟಗಾರಿಕೆ	1	100.00

ರಾಜ್ಯದ ತಹಶೀಲ್ದಾರರಿಗೆ ಸರ್ಕಾರಿ ನಿವಾಸ.

1047 (1858): ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):-

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯ ಎಷ್ಟು ತಾಲ್ಲೂಕುಗಳನ್ನು ಹೊಂದಿದೆ;

ಆ. ತಾಲ್ಲೂಕು ತಹಶೀಲ್ದಾರರಿಗೆ ಸರ್ಕಾರಿ ನಿವಾಸ ಒದಗಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು;

ಇ. ತಾಲ್ಲೂಕಿನ ತಹಶೀಲ್ದಾರರು ತಾಲ್ಲೂಕಿಗೆ ವರ್ಗವಾಗಿ ಬಂದ ಮೇಲೆ ನಿವಾಸ ಇಲ್ಲದೆ ತೊಂದರೆಗೆ ಒಳಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಮಂತ್ರಿಗಳು):-

ಅ. 175.

ಆ. ರಾಜ್ಯದ ಕೆಲವು ತಾಲ್ಲೂಕು ತಹಶೀಲ್ದಾರರುಗಳಿಗೆ ಪದಾಂಕಿತ ನಿವಾಸ ಕಟ್ಟಡಗಳಿದ್ದು ಮತ್ತೆ ಕೆಲವು ತಾಲ್ಲೂಕುಗಳಲ್ಲಿ ಇತರೆ ಇಲಾಖೆಯ ಕಟ್ಟಡಗಳನ್ನು ಒದಗಿಸಲಾಗಿದೆ. ಪದಾಂಕಿತ ನಿವಾಸ ಕಟ್ಟಡಗಳಿಲ್ಲದ ತಾಲ್ಲೂಕು ತಹಶೀಲ್ದಾರರುಗಳಿಗೆ ಮತ್ತು ಕಂದಾಯ ಇಲಾಖೆಯ ಇತರೆ ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳನ್ನು ಒದಗಿಸುವ ಉದ್ದೇಶದಿಂದ ಪೋಲೀಸ್ ಇಲಾಖೆಯಲ್ಲಿನ ಹೌಸಿಂಗ್ ಕಾರ್ಪೊರೇಷನ್ ಮಾದರಿಯಲ್ಲಿ ಕಂದಾಯ ಇಲಾಖೆಯಲ್ಲೂ ಹೌಸಿಂಗ್ ಕಾರ್ಪೊರೇಷನ್ ರಚಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಇ. ಇಲ್ಲ.

ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡುವಲ್ಲಿ ವಿಳಂಬ.

1048 (1857): ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):-

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಧಾರವಾಡದಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಕೃಷಿ ವಿಶ್ವವಿದ್ಯಾಲಯಕ್ಕೆ ಪಂಡಿತ ಜವಾಹರಲಾಲ್ ಕೃಷಿ ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡಲು ತಡವಾಗುತ್ತಿರುವುದಕ್ಕೆ ಕಾರಣವೇನು;

ಆ. ವಿಶ್ವವಿದ್ಯಾಲಯದಲ್ಲಿ ಗ್ರಾಮೀಣ ಪ್ರದೇಶದ ಕೃಷಿ ಸಮಾಜಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಪ್ರವೇಶ ಸಿಗದೇ ಇರುವದು ಸರ್ಕಾರದವರ ಗಮನಕ್ಕೆ ಬಂದಿದೆಯೇ;